**C**

**CCE PR REVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 28. 06. 2018 ] ಸಂಕೇತ ಸಂಖ್ಯೆ : **62-K**

Date : 28. 06. 2018 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)

[ ಗರಿಷ್ಠ ಅಂಕಗಳು : 100

[ Max. Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)**<br>**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಅಮೇರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿವೇಳೆ ತಂಗಿದರೆ ಏನು ಮಾಡುತ್ತಾರೆ ?<br>***ಉತ್ತರ :***<br>ಅಮೇರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿವೇಳೆ ತಂಗಿದರೆ ಅಲೆಮಾರಿಗಳೆಂದು ಲಾಕಪ್‌ಗೆ ಹಾಕುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 1942 ರಲ್ಲಿ ಮೋಹನಪುರದಲ್ಲಿ ನಡೆದ ಚಳುವಳಿ ಯಾವುದು ?<br>***ಉತ್ತರ :***<br>1942 ರಲ್ಲಿ ಮೋಹನಪುರದಲ್ಲಿ ನಡೆದ ಚಳುವಳಿ 'ಚಲೇಜಾವ್' ಚಳುವಳಿ. | |
| 3. | ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?<br>***ಉತ್ತರ :***<br>ಗಾಂಧೀಜಿಯವರು ಕೊಟ್ಟ ಮಂತ್ರ 'ಮಾಡು ಇಲ್ಲವೆ ಮಡಿ'. | |
| 4. | ಪೋರ್ಚುಗೀಸರು ಕೇಳಿದ ಬೆಲೆಗೆ ವಸ್ತುಗಳನ್ನು ಕೊಡಲು ಅಬ್ಬಕ್ಕದೇವಿ ಒಪ್ಪದಿರಲು ಕಾರಣವೇನು ?<br>***ಉತ್ತರ :***<br>ಪೋರ್ಚುಗೀಸರು ಕಡಿಮೆ ಬೆಲೆಗೆ ಕೇಳಿದಾಗ ಕಷ್ಟಪಟ್ಟು ಬೆಳೆದ ರೈತರಿಗೆ ಅನ್ಯಾಯವಾಗಬಾರದೆಂದು ಅಬ್ಬಕ್ಕದೇವಿ ಕೊಡಲು ಒಪ್ಪಲಿಲ್ಲ. | |
| 5. | ಪೋರ್ಚುಗೀಸರು ಭಾರತಕ್ಕೆ ಏಕೆ ಬಂದರು ?<br>***ಉತ್ತರ :***<br>ಪೋರ್ಚುಗೀಸರು ಏಲಕ್ಕಿ, ಅಕ್ಕಿ, ಮೆಣಸಿನಕಾಳು, ನೇಕಾರರು ನೇಯ್ದ ಬಟ್ಟೆಯ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. | |
| 6. | ಹೆಂಡತಿಯ ಬಲವಂತಕ್ಕಾಗಿ ಬೀಚಿಯವರು ಓದಿದ ಪುಸ್ತಕ ಯಾವುದು ?<br>***ಉತ್ತರ :***<br>ಹೆಂಡತಿಯ ಬಲವಂತಕ್ಕಾಗಿ ಬೀಚಿಯವರು ಓದಿದ ಪುಸ್ತಕ 'ಸಂಧ್ಯಾರಾಗ'. | |
| 7. | ಬೀಚಿಯವರ ತಿಮ್ಮನಿಗೂ, ಡಿ.ವಿ.ಜಿ.ಯವರ ತಿಮ್ಮನಿಗೂ ಇರುವ ವ್ಯತ್ಯಾಸವೇನು ?<br>***ಉತ್ತರ :***<br>ಡಿ.ವಿ.ಜಿ.ಯವರ ತಿಮ್ಮ ಸೂರ್ಯ, ಬೀಚಿಯವರ ತಿಮ್ಮ ಬೆಡ್‌ಲ್ಯಾಂಪ್. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ‘ಭೂಮಿತಾಯ ಕುಡಿಗಳು’ ಪದ್ಯದಲ್ಲಿ ಕವಿ ಯಾರು ಯಾರು ಒಂದೇ ಎಂದು ಹೇಳಿದ್ದಾರೆ ? | |
| | ***ಉತ್ತರ :*** | |
| | ‘ಭೂಮಿತಾಯ ಕುಡಿಗಳು’ ಪದ್ಯದಲ್ಲಿ ನಾವು, ನೀವು, ಅವರು, ಇವರು ಎಲ್ಲ ಒಂದೇ ಎಂದು ಹೇಳಿದ್ದಾರೆ. | |
| 9. | ಸಿ.ಪಿ.ಕೆ.ಯವರು ಅಹಂಕಾರವು ನುಚ್ಚುನೂರಾಗುವ ತಾಣ ಯಾವುದೆಂದು ಹೇಳಿದ್ದಾರೆ ? | |
| | ***ಉತ್ತರ :*** | |
| | ಸಿ.ಪಿ.ಕೆ.ಯವರು ‘ಗ್ರಂಥಾಲಯ’ವು ಅಹಂಕಾರವನ್ನು ನುಚ್ಚುನೂರಾಗಿಸುವ ತಾಣ ಎಂದಿದ್ದಾರೆ. | |
| 10. | ‘ಬಸವಣ್ಣನವರ ಪ್ರಕಾರ ಮರ್ತ್ಯಲೋಕ’ ಯಾವುದು ? | |
| | ***ಉತ್ತರ :*** | |
| | ಮಿಥ್ಯವ ನುಡಿವುದೇ ಬಸವಣ್ಣನವರ ಪ್ರಕಾರ ಮರ್ತ್ಯಲೋಕವಾಗಿದೆ. | |
| 11. | ಬಸವಣ್ಣನವರ ಪ್ರಕಾರ ಸ್ವರ್ಗ ಯಾವುದು ? | |
| | ***ಉತ್ತರ :*** | |
| | ಬಸವಣ್ಣನವರ ಪ್ರಕಾರ ಆಚಾರವೇ ಸ್ವರ್ಗವಾಗಿದೆ. | |
| 12. | ಪುರಂದರದಾಸರು ಡಾಂಭಿಕ ಭಕ್ತನನ್ನು ‘ನಾಟಕ ಸ್ತ್ರೀ’ ಎಂದು ಕರೆದಿರುವುದು ಮೆಚ್ಚುವಂತಹದ್ದೇಕೆ ? | |
| | ***ಉತ್ತರ :*** | |
| | ಡಾಂಭಿಕ ಭಕ್ತನು ಸಹ ‘ನಾಟಕ ಸ್ತ್ರೀ’ಯಂತೆ ತನ್ನ ನೈಜ ಸ್ವಭಾವವನ್ನು ಬಿಟ್ಟು ನಟಿಸುತ್ತಾನೆ. | |
| 13. | ಪುಲಿಗೆರೆ ಸೋಮನಾಥರು ಎಂಥವನು ಮಗನಲ್ಲ ಎಂದಿದ್ದಾರೆ ? | |
| | ***ಉತ್ತರ :*** | |
| | ಪುಲಿಗೆರೆ ಸೋಮನಾಥರು ವಿನಯವಿಲ್ಲದವನು ಮಗನಲ್ಲ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಪುಲಿಗೆರೆ ಸೋಮನಾಥರವರು ಯಾರು ಭಟನಾಗಬೇಕೆಂದು ಹೇಳಿದ್ದಾರೆ ?<br>***ಉತ್ತರ :***<br>ಯುದ್ಧ ಮಾಡಲು ಬಲ್ಲವನೇ ಭಟನಾಗಬೇಕು ಎಂದು ಪುಲಿಗೆರೆ ಸೋಮನಾಥರು ಹೇಳಿದ್ದಾರೆ. | |
| 15. | ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದು ಏಕೆ ?<br>***ಉತ್ತರ :***<br>ಚಿಕ್ಕ ವಯಸ್ಸಿನ ಧರ್ಮಪದನ ಪ್ರತಿಭೆಯ ಮುಂದೆ ತಮ್ಮ ಪ್ರತಿಭೆಯು ಕಡಿಮೆಯಾಗಬಾರೆಂದು ವಿಷವುಣಿಸುವ ಪ್ರಯತ್ನ ಮಾಡಿದರು. | |
| 16. | ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ?<br>***ಉತ್ತರ :***<br>ನನ್ನ ಮಗ 'ಮಹಾಶಿಲ್ಪಿ' ಎಂಬ ಪದವು ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿತ್ತು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 17. | ಗಾಂಧೀಜಿಯವರು ಗೌರಮ್ಮನವರ ಮನೆಗೆ ಬಂದದ್ದು ಏಕೆ ?<br>***ಉತ್ತರ :***<br>ಕೊಡಗಿನ ಗೌರಮ್ಮ ಗಾಂಧೀಜಿಯವರ ಅನುಯಾಯಿ ಆಗಿದ್ದರು. ತಮ್ಮ 21ನೇ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹವನ್ನು ಮಾಡಿದರು. ಕಿತ್ತಲೆ ಹಣ್ಣು ನೀಡಿ ಉಪವಾಸವನ್ನು ಅಂತ್ಯಗೊಳಿಸಿದ ಸಂದರ್ಭದಲ್ಲಿ ಗಾಂಧೀಜಿ ಕೊಟ್ಟ ಮಾತಿನಂತೆ ಗೌರಮ್ಮನವರ ಮನೆಗೆ ಬಂದರು. | |
| 18. | ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಗೌರಮ್ಮನವರ ಕಥೆಗಳಲ್ಲಿ ಸುತ್ತಮುತ್ತಲಿನ ಬದುಕಿನಲ್ಲಿ ಕಂಡುಕೇಳಿದ ಘಟನೆಗಳನ್ನು ಕಾಣಬಹುದು. ಮಹಿಳಾಲೋಕದ ಕನಸುಗಳ ಆದರ್ಶಚಿತ್ರಣವನ್ನು ತಮ್ಮ ಕಥೆಗಳಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನೀಡಲು ಪ್ರಯತ್ನಿಸಿದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ಕ್ರೌರ್ಯದ ರೀತಿಯನ್ನು ಗ್ರಹಿಸಿ ಸಮಾಜದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಎಲ್ಲಾ ಮಾನವ ಜೀವಿಗಳ ಸ್ವಾತಂತ್ರ್ಯ ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜದ ಶಕ್ತಿಯಿರುವುದು ಪ್ರತಿಬಿಂಬಿತವಾಗಿದೆ. | |
| 19. | ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳು ಯಾವುವು ? | |
| | *ಉತ್ತರ :* | |
| | ಶಿವರಾಮ ಕಾರಂತ, ಮಾಸ್ತಿವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮುಂತಾದ ಪ್ರಸಿದ್ಧ ಕವಿಗಳು ಮಂಜುನಾಥಯ್ಯನವರ ಮನೆಗೆ ಆಗಾಗ್ಗೆ ಬರುತ್ತಿದ್ದರು. ಪ್ರಸಿದ್ಧ ಲೇಖಕಿ ಹಾಗೂ ಸಾಮಾಜಿಕ ಕಾರ್ಯಕರ್ತೆಯಾದ ಆರ್. ಕಲ್ಯಾಣಮ್ಮ ಅವರೊಡನೆಯೂ ಸಂಪರ್ಕ ಇತ್ತು. ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ ಬದಲಾವಣೆಗಳು ಮತ್ತು ಹೊಸ ಬರವಣಿಗೆಯ ಸಂಪರ್ಕದ ಜೊತೆ ಯಕ್ಷಗಾನ, ತಾಳಮದ್ದಲೆ ಕುಮಾರವ್ಯಾಸ ಮತ್ತು ಉಮರ ಖಯಾಮನ ಕಾವ್ಯ ಇವೆಲ್ಲವೂ ಗೌರಮ್ಮನ ಸಾಹಿತ್ಯಕ್ಕೆ ಪ್ರೇರಕವಾಗಿದ್ದವು. | |
| 20. | ಶಿಶುನಾಳ ಶರೀಫರು ತಮಗಾದ ದುಃಖವನ್ನು ಹೇಗೆ ಕಡಿಮೆ ಮಾಡಿಕೊಂಡರು ? | |
| | *ಉತ್ತರ :* | |
| | ಶರೀಫರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ದೇವರ ಧ್ಯಾನ ಹಾಗೂ ಉಪಾಸನೆಗಳಲ್ಲಿ ತಮ್ಮ ನೋವನ್ನು ಮರೆಯುತ್ತಿದ್ದರು. ಆಧ್ಯಾತ್ಮ – ಸುಬೋಧ ಧರ್ಮನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ತಮ್ಮ ದುಃಖವನ್ನು ದೂರಗೊಳಿಸಿಕೊಂಡರು. | |
| 21. | ಶಿಶುನಾಳ ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಬೆರೆತು ಹೋಗಿತ್ತು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | *ಉತರ :* | |
| | ಶರೀಫರ ಪ್ರಾಥಮಿಕ ಶಿಕ್ಷಣವು ಕನ್ನಡ ಕೂಲಿ ಮಠದಲ್ಲಿ ಆಯಿತು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತ, ಅಲ್ಲಮಪ್ರಭುಗಳ ಬಯಲಾಟದಲ್ಲಿ ಭಾಗವಹಿಸುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಜಾತ್ರೆ, ಉತ್ಸವಗಳಲ್ಲಿ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಹೀಗೆ ಶರೀಫರ ಬಾಲ್ಯ ಹಿಂದೂ ಪರಂಪರೆಯೊಂದಿಗೆ ಬೆರೆತು ಹೋಯಿತು. | |
| 22. | ಗೋವಿಂದ ಭಟ್ಟರ ಗುಣಸ್ವಭಾವ ತಿಳಿಸಿ. | |
| | ***ಉತ್ತರ :*** | |
| | ಗೋವಿಂದ ಭಟ್ಟರು ಜ್ಞಾನಿಗಳೂ, ವಿದ್ಯಾವಂತರೂ ಆಗಿದ್ದರು. ನಗೆಮೊಗದ ಪ್ರಸಾದ ವಾಣಿಯ ದಿವ್ಯವ್ಯಕ್ತಿಗಳಾಗಿದ್ದರು. ಇವರು ಶಕ್ತಿಯ ಉಪಾಸಕರು ಆಗಿದ್ದರು. ಉದಾರ ಹೃದಯಿಗಳು. ಜಾತಿ ಮತಗಳ ಭೇದವಿರಲಿಲ್ಲ. ಇವರು ಆದರ್ಶ ಗುರುಗಳಾಗಿದ್ದರು. | |
| 23. | 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಯಾವ ರೀತಿ ಪ್ರಭಾವವನ್ನು ಬೀರಿದೆ ? | |
| | ***ಉತ್ತರ :*** | |
| | ಪ್ರೊ. ಜಹಗೀರದಾರರ 'ವಿಶ್ವಾಮಿತ್ರ ಸೃಷ್ಟಿ'ಯ ಎರಡು ಸಂಪುಟಗಳು ಬೀಚಿಯವರನ್ನು ಬೇಗ ಸೆರೆ ಹಿಡಿದವು. ಆಚಾರರ ಮಾತಿನ ಚಮತ್ಕಾರ, ವಿಚಾರ ಮಂಡನೆ, ಕಲಾಕುಶಲತೆಗೆ ಬೀಚಿಯವರು ಮಾರು ಹೋಗುವಂತೆ ಮಾಡಿ ಅವರ ತಲೆಯನ್ನು ಗೆದ್ದಿತು. | |
| 24. | ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ ? | |
| | ***ಉತ್ತರ :*** | |
| | ಸತೀಶ ಕುಲಕರ್ಣಿಯವರು ಜಾತಿ, ಮತ, ಧರ್ಮಭೇದವಿಲ್ಲದ ನಾಡನ್ನು ಕಟ್ಟುತ್ತೇವೆ. ಅದರಲ್ಲೂ ಭೀತಿ ಇಲ್ಲದ ಕುಲವೆನ್ನದ ಮನುಕುಲದ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ. | |
| 25. | 'ಕಟ್ಟತೇವ ನಾವು' ಕವಿತೆಯು ಕ್ರಾಂತಿಕಾರಿಗಳ ಕನಸಿನ ಹಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ ? | |
| | ***ಉತ್ತರ :*** | |
| | ಸಮಾಜದ ತಾರತಮ್ಯ, ಅಸಮಾನತೆಗೆ ಒಳಗಾದ ಕ್ರಾಂತಿಕಾರಿಗಳು ಕಷ್ಟಕಾರ್ಪಣ್ಯಗಳನ್ನು ಸಹಿಸಲಾಗದೆ ಕ್ರಾಂತಿಕಾರಕ ಬದಲಾವಣೆಯನ್ನು ಬಯಸಿ ಕ್ರಾಂತಿಕೆಂಡದ ಕುಂಡವ ಹೊತ್ತು ಮುಳ್ಳನ್ನು ತುಳಿಯುತ ರಕ್ತದ ನಡಿಗೆಯಲ್ಲಿ ತಮ್ಮ ಪಾಲಿನ ಹಾಡನ್ನು ಬರೆಯುತ್ತೇವೆ ಎಂದು ಸತೀಶ ಕುಲಕರ್ಣಿಯವರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಕನಸು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ?<br>*ಉತ್ತರ :*<br>ಸಮಾಜದಲ್ಲಿ ಅಸಮಾನತೆ ಹಾಗೂ ಜಾತಿ ಪದ್ಧತಿ ಅತಿದೊಡ್ಡ ಸಮಸ್ಯೆ. ಸಮಾಜದಲ್ಲಿನ ತಾರತಮ್ಯ ಸರ್ವರ ಏಳಿಗೆಗೆ ಮಾರಕ. ಸಮಾಜದ ಹಿತದೃಷ್ಟಿಯಿಂದ ಹೋರಾಟದ ಹಾದಿಯನ್ನು ಹಿಡಿಯುವುದು ಅನಿವಾರ್ಯ. ಸಮಾಜದ ಒಡಕಿಗೆ ಕಾರಣವಾದ ಮನಸ್ಸುಗಳನ್ನು, ತುಳಿತಕ್ಕೆ ಒಳಗಾದವರು ಕಂಡ ಕನಸುಗಳನ್ನು ಒಂದು ಮಾಡಿ ಜಾತಿ ಭೀತಿಯಿಂದ ಮುಕ್ತವಾದ ಬಾಳನ್ನು ಕಟ್ಟುತ್ತೇವೆ. ಸಂಕಷ್ಟ ಮತ್ತು ಭಯೋತ್ಪಾದನೆಯಿಂದ ಮುಕ್ತವಾಗಬೇಕೆಂದು ನೂರಾರು ಮನಸುಗಳು ಕಂಡ ಕೋಟಿ ಕನಸುಗಳು ನನಸಾಗುವಂತೆ ಮಾಡಿ ಆ ಮೂಲಕ ಮನುಜರ ನಡುವಿನ ವೈಮನಸ್ಸನ್ನು ತೊಡೆದುಹಾಕುತ್ತೇವೆ ಎಂದಿದ್ದಾರೆ. | |
| 27. | ಗ್ರಂಥಾಲಯವನ್ನು ಹೊಕ್ಕಾಗ ಕವಿ ಸಿ.ಪಿ.ಕೆ. ಅವರಿಗಾದ ಅನುಭವವೇನು ?<br>*ಉತ್ತರ :*<br>ಕವಿಗೆ ಗ್ರಂಥಾಲಯವನ್ನು ಹೊಕ್ಕಾಗ ಇಡೀ ವಿಶ್ವವೇ ಅಡಗಿದೆ ಎಂದು ಅನಿಸಿತು. ಕಣ್ಣ ದೃಷ್ಟಿ ಹರಿವತನಕ ಕಂಡ ಪುಸ್ತಕಗಳ ರಾಶಿ ಗ್ರಂಥಗಿರಿ ಪಂಕ್ತಿಗಳಂತೆ ಕಂಡಿತು. ಇವುಗಳ ಅಡಿಯಲ್ಲಿ ನಾನು ಧೂಳಕಣವಾಗಿ ನಿಲ್ಲುವೆನು ಅನಿಸುತ್ತಿತ್ತು. ಒಂದು ಕ್ಷಣ ನಿಂತರೂ ನನ್ನ ಅಹಂಕಾರವು ನಾಶವಾಗಿ ಅಲ್ಪತೆಯ ಅರಿವಾಗುತ್ತದ ಎಂಬ ಭಾವನೆ ಮೂಡಿತು. ಹಿರಿಬಾಳುವೆಗಳ ಹಾಗೂ ಪಳೆಯುಳಿಕೆಯಂತಿರುವ ಗ್ರಂಥಾಲಯವು ವಿಶ್ವರೂಪದರ್ಶನ ಮಾಡಿಸಿ ಭೀತ ವಿಸ್ಮಯರಾಗುವಂತೆ ಮಾಡಿತು. | |
| 28. | ರೈತನು ದನಕರುಗಳ ಸ್ಥಿತಿ ಹೇಗಾಗಿದೆ ಎಂದು ಮಳೆರಾಯನಲ್ಲಿ ಏನೆಂದು ನಿವೇದಿಸಿಕೊಂಡಿದ್ದಾನೆ ?<br>*ಉತ್ತರ :*<br>ರೈತನ ರಕ್ಷಕನಾದ ಮಳೆರಾಯ ಬಾರದೆ ಇಡೀ ಭೂಮಿ ಸೊಪ್ಪಿನಂತೆ ಸೊರಗಿ ಬಾಡಿ ಹೋಗಿವೆ. ಬೆಳೆ ಬೆಳೆಯದೆ ದನಕರುಗಳಿಗೆ ಮೇವಿಲ್ಲದಂತಾಗಿ ಸಪ್ಪೆದಂಟಿನಂತಾಗಿ ಬಡಕಲಾಗಿದೆ. ಕುಡಿಯಲು ನೀರಿಲ್ಲದಂತೆ ಆಗಿವೆ. ನಮ್ಮ ರಕ್ಷಕನಾದ ನೀನು ಬಂದು ನಮ್ಮನ್ನು ಕಾಪಾಡು ಎಂದು ರೈತನು ಮಳೆರಾಯನಲ್ಲಿ ಪ್ರಾರ್ಥಿಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಮೋಡಗಳನ್ನು ಕಂಡ ರೈತರ ಸಂಭ್ರಮವನ್ನು ಜನಪದರು ವರ್ಣಿಸಿರುವ ರೀತಿ ಮೆಚ್ಚುವಂತಹದ್ದು ಏಕೆ ? | |
| | ***ಉತ್ತರ :*** | |
| | ಪೂರ್ವ ದಿಕ್ಕಿನಲ್ಲಿ ಚಿತ್ತಾರ ಮೂಡಿಸುವಂತೆ ಕಂಡುಬರುವ ಮೋಡವನ್ನು ಕಂಡು ಬಿಳಿಗೋಡೆಗೆ ಕಪ್ಪು ಬಣ್ಣ ಬಳಿದಿರುವಂತೆ ಭಾಸವಾಯಿತು. ಇಡೀ ಆಕಾಶವೇ ಭೋರ್ಗರೆಯುವುದೋ ಎಂಬಂತೆ ಮಳೆರಾಯನಿಗೆ ಹೇಳುವ ಪರಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. | |
| 30. | ಈರಪ್ಪ ಎಂ. ಕಂಬಳಿಯವರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು ? | |
| | ***ಉತ್ತರ :*** | |
| | ಬಸ್ ಮೇಲೆ ಒಳಗೆ ತುಂಬಾ ತುಂಬಿದ್ದ ಜನರನ್ನು ಹೊತ್ತು ಬಸ್‌ಸ್ಟ್ಯಾಂಡಿನಿಂದ ಹೊರಬಿದ್ದು ರಸ್ತೆಗಿಳಿಯಿತು. ಬಸ್ಸಿನ ಟಾಪ್ ಮೇಲೆ ಎಸೆದಿದ್ದ ಸ್ಟೆಪ್ನಿಯ ಟಾಯರ್ ಮೇಲೆ ಕುಳಿತಿದ್ದ ಲೇಖಕರು ಕೆಳಗಿದ್ದವರಿಗೆ ಮೊದಲು ಕಣ್ಣಿಗೆ ಬೀಳುತ್ತಿದ್ದರು. ಹೀಗೆ ಬಸ್‌ಸ್ಟ್ಯಾಂಡಿನಿಂದ ಹೊರಬಿದ್ದಾಗ ಆಕಾಶಯಾನ ಮಾಡುವಂತೆ ಭಾಸವಾಗಿ ಆನೆಯಂಬಾರಿ ಏರಿದಂತೆ ಅನಿಸಿತು. | |
| | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಪದ್ಯದ ಹೆಸರು, ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ." | |
| | ***ಉತ್ತರ :*** | |
| | ಈ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ವಿರಚಿತ 'ಅಮೆರಿಕಾದಲ್ಲಿ ಗೊರೂರು' ಎಂಬ ಪ್ರವಾಸ ಕಥನದಿಂದ ಆರಿಸಲಾದ 'ಲಾಕಪ್‌ನಲ್ಲಿ ಒಂದು ರಾತ್ರಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ. ಈ ಮಾತನ್ನು ಅಮೆರಿಕಾದ ಪೊಲೀಸಿನವನು ಗೊರೂರಿಗೆ ಹೇಳಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗೊರೂರರು ಅಮೆರಿಕಾದ ಮಿನಿಪೊಲೀಸ್ ನಗರದಲ್ಲಿ ರಾತ್ರಿ ವೇಳೆ ದಾರಿತಪ್ಪಿಸಿಕೊಂಡು ಟ್ರಾಫಿಕ್ ಪೋಲೀಸ್‌ನ ವನ ಸಹಾಯವನ್ನು ಕೇಳಿದಾಗ ಪೋಲೀಸನು ಗೊರೂರರನ್ನು ಮನೆಗೆ ಕರೆದುಕೊಂಡು ಬಂದು ಉಪಚರಿಸಿದನು. ಅಲ್ಲದೆ ಮಲಗುವ ವ್ಯವಸ್ಥೆಯನ್ನು ಮಾಡಿಕೊಟ್ಟು ಉಭಯ ಕುಶಲೋಪರಿ ವಿಚಾರಿಸಿ ಭಾರತದ ಪೋಲೀಸರ ಸಂಬಳ, ಸಾರಿಗೆ ವಿಚಾರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| 32. | "ಒಂದು ಪಿಳ್ಳೆ ಜೀವಂತವಿರುವವರೆಗೆ, ನಿಮ್ಮ ಆಜ್ಞೆ ನಡೆಯಲಾರದು ಇಲ್ಲಿ." | |
| | ***ಉತ್ತರ :*** | |
| | ಈ ವಾಕ್ಯವನ್ನು ಪ್ರೊ॥ ಎಸ್. ಆರ್. ರೋಹಿಡೇಕರ್ ಬರೆದಿರುವ 'ರಾಮಸಿಂಗ್ ಚೌಕ' ಎಂಬ ಏಕಾಂತ ನಾಟಕದಿಂದ ಆರಿಸಲಾದ 'ಧ್ವಜ ರಕ್ಷಣೆ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಮಸಿಂಗನು ಕುಲಕರ್ಣಿಗೆ ಹೇಳಿದನು. | |
| | ಕುಲಕರ್ಣಿಯವರು ಚಳುವಳಿಕಾರರನ್ನು ಚದುರಿಸಲು ಎಷ್ಟೇ ಪ್ರಯತ್ನಿಸಿದರೂ ಅದು ವಿಫಲವಾಯಿತು. ಆ ಮೇಲ ಪಿಸ್ತೂಲು ತೋರಿಸಿ ಹಠಮಾಡಬೇಡಿ, ಚದುರಿರಿ ಎಂದಾಗ ಶಕ್ಯವಿಲ್ಲ, ಮೋಹನಪುರದಲ್ಲಿ ಒಂದು ಪಿಳ್ಳೆ ಜೀವಂತವಿರುವವರೆಗೂ ನಾವು ಹೋರಾಡುತ್ತೇವೆ ಎಂದು ಹೇಳಿದನು. | |
| | ಇಲ್ಲಿ ರಾಮಸಿಂಗನ ದೇಶಭಕಿ ಮತ್ತು ಕೊನೆ ಉಸಿರಿರುವವರೆಗೆ ಹೋರಾಡುವ ಛಲ ಕಾಣಬಹುದು. | |
| 33. | "ಮುದುಡಿ ಹೋಗುವುದಿಲ್ಲಿ; ನನ್ನ ಅಹಂಕಾರ" | |
| | ***ಉತ್ತರ :*** | |
| | ಈ ವಾಕ್ಯವನ್ನು ಸಿ.ಪಿ.ಕೆ.ಯವರು ಬರೆದ 'ಅನಂತ ಪೃಥ್ವಿ' ಎಂಬ ಕವನದಿಂದ ಆರಿಸಲಾದ 'ಗ್ರಂಥಾಲಯದಲ್ಲಿ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಈ ಮಾತನ್ನು ಕವಿಯು ಓದುಗರಿಗೆ ಹೇಳಿದ್ದಾರೆ. | |
| | ಗ್ರಂಥಾಲಯವು ಜ್ಞಾನ ಸಾಗರವಿದ್ದಂತೆ, ಅಲ್ಲಿ ಹೋದರೆ ಭಯ ಮತ್ತು ವಿಸ್ಮಿತರಾಗಿ ನಿಲ್ಲುತ್ತೇವೆ. ನಾನೇ ಜ್ಞಾನಿ ಎಂಬ ಅಹಂಕಾರ ಮಾಯಾವಾಗುತ್ತದೆ. ಅಹಂಕಾರ ನಾಶವಾಗಿ ಅಲ್ಪತೆಯ ಅರಿವಾಗುತ್ತದೆ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | "ಕರದೊಳು ಜಪಮಣಿ ಬಾಯೊಳು ಮಂತ್ರವು"<br>***ಉತ್ತರ :***<br>ಈ ವಾಕ್ಯವನ್ನು 'ಪುರಂದರ ಸಾಹಿತ್ಯ ದರ್ಶನ ಸಂಪುಟ–೧ರಲ್ಲಿ ಇರುವ 'ಉದರ ವೈರಾಗ್ಯ' ಎಂಬ ಕೀರ್ತನೆಯಿಂದ ಆರಿಸಲಾಗಿದೆ.<br>ಡಾಂಭಿಕ ಭಕ್ತನು ಉದಯಕಾಲದೊಳೆದ್ದು ಗಡಗಡ ನಡುಗುತ್ತ ನದಿಯಲ್ಲಿ ಮಿಂದವೆಂದು ಹೇಳಿ ಕಂಚುಗಾರನ ಅಂಗಡಿಯಂತೆ ಕಂಚಿನ ಪ್ರತಿಮೆಗಳನ್ನು ಜೋಡಿಸಿ ಬಲು ಜ್ಯೋತಿಗಳನ್ನು ಹಚ್ಚಿ ಕೈಯಲ್ಲಿ ಜಪಮಣಿ ಹಿಡಿದು ಬಾಯಲಿ ಮಂತ್ರವ ಹೇಳಿ ಪರಸತಿ, ಪರಧನಕ್ಕಾಗಿ ಚಿಂತೆಯನು ಮಾಡುತ ಪರಮ ಜ್ಞಾನಿಯಂತೆ ತೋರುವನು ಎಂದು ಹೇಳುವಾಗ ಈ ಮಾತು ಬಂತು. | |
| 35. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಕಂಚುಗಾರನ ..........................................................<br>.................................................................. ನೆರಹಿ<br>ಮಿಂಚಬೇಕೆಂದು ......................................................<br>......................................................... ಮಾಡುವುದು<br>**ಅಥವಾ**<br>ನಾನು ಎಂಬುದ ....................................................<br>...................................................... ಪ್ರೇರಣೆಯೆಂದು<br>.......................... ಮೌನದಿ ..................................<br>.................................................... ಕಾರ್ಯಗಳೆಲ್ಲವು<br>***ಉತ್ತರ :***<br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು.<br>**ಅಥವಾ** | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಏನಾದರು ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು. | |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 36. | ಗೊರೂರು ರಾಮಸ್ವಾಮಿ ಅಯ್ಯಂಗಾರ್<br>***ಉತ್ತರ :***<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು ಹೇಮಾವತಿ, ಮೆರವಣಿಗೆ, ನಮ್ಮ ಊರಿನ ರಸಿಕರು, ಹಳ್ಳಿಯ ಹಾಡು, ಗರುಡಗಂಬದ ದಾಸಯ್ಯ, ಅಮೆರಿಕಾದಲ್ಲಿ ಗೊರೂರು, ಭೂತಯ್ಯನ ಮಗ ಅಯ್ಯು ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. | |
| 37. | ಬಸವಣ್ಣ<br>***ಉತ್ತರ :***<br>೧೨ನೇ ಶತಮಾನದಲ್ಲಿ ಜನಿಸಿದವರು. ವಿಜಯಪುರ ಜಿಲ್ಲೆ ಬಾಗೇವಾಡಿ ಇವರ ಜನ್ಮಸ್ಥಳವಾಗಿದೆ. ಇವರು ಅನೇಕ ವಚನಗಳನ್ನು ಬರೆದಿದ್ದಾರೆ. ಕೂಡಲಸಂಗಮದೇವ ಇವರ ವಚನಗಳ ಅಂಕಿತವಾಗಿದೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 38. | ಅಬ್ಬಕ್ಕದೇವಿಯು ಸಪ್ತಸಮುದ್ರದಾಚೆ ವಿಖ್ಯಾತಳಾದುದು ಹೇಗೆ ?<br>***ಅಥವಾ***<br>ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನ ಕುರಿತು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :* | |
| | ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾದರು. ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ, ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋಗಿ ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ನೌಕೆಯ ಮೇಲೆ ಎಸೆದರು. ಉರಿಯುವ ನೌಕೆಯಿಂದ ತಪ್ಪಿಸಿಕೊಳ್ಳಲು ಪೋರ್ಚುಗೀಸರು ಸಮುದ್ರಕ್ಕೆ ಹಾರಿದಾಗ ಸೈನಿಕರ ಈಟಿ, ಖಡ್ಗಗಳಿಗೆ ಬಲಿಯಾದರು. ಹೀಗೆ ಪೋರ್ಚುಗೀಸರ ಹಡಗನ್ನು ಮುಳುಗಿಸಿ ಮಿರಾಂಡಾ ಮತ್ತು ಡಿಮೆಲ್ಲೊ ಎಂಬ ಸೇನಾಧಿಪತಿಗಳನ್ನು ಓಡಿಸಿ ಸಪ್ತ ಸಮುದ್ರದಾಚೆ ಅಬ್ಬಕ್ಕದೇವಿ ವಿಖ್ಯಾತಳಾದಳು. | |
| | **ಅಥವಾ** | |
| | ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು. ಸೆರೆಯಾಳುಗಳನ್ನು ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ. ಮುಂದೆ ಹಿತ ಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮನ ತೋಪು ಹಾರದಂತೆ ಮೋಸಮಾಡಿ ಅವಳನ್ನು ಸೆರೆಹಿಡಿದು ಇಟ್ಟಾಗಲೂ ಸ್ವಾತಂತ್ರ್ಯದ ಕನಸನ್ನೇ ಕಂಡ ವೀರರಾಣಿ. ಸೆರಮನೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣ 'ತಾಯಿ' ಎಂದು ಕರೆದಾಗ 'ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?' ಎಂದು ಕೇಳಿದ ಕೆಚ್ಚಿನ ರಾಣಿ ಚೆನ್ನಮ್ಮ "ನಿಮ್ಮ ಧಮನಿ ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ" ಎಂದು ಹುರಿದುಂಬಿಸಿದವಳು. ಬ್ರಿಟಿಷರ ವಿರುದ್ಧ ಹೋರಾಟದ ಕಹಳೆ ಊದಿದ್ದು ಝಾನ್ಸಿ ಲಕ್ಷ್ಮೀಬಾಯಿಗಿಂತಲೂ ೨೪ ವರ್ಷ ಮೊದಲು. | |
| 39. | 'ಮನುಜ ಜಾತಿ ತಾನೊಂದೆ ವಲಂ' ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ. | |
| | **ಅಥವಾ** | |
| | 'ಭೂಮಿತಾಯ ಕುಡಿಗಳು' ಈ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | *ಉತ್ತರ :* | |
| | ಪ್ರಪಂಚದ ಒಂದೊಂದು ಭಾಗದಲ್ಲಿ ಆಚಾರ–ವಿಚಾರ, ಉಡುಗೆ–ತೊಡುಗೆ ಬೇರೆಯಿದ್ದರೂ ನಾವೆಲ್ಲರೂ ಮಾನವರು. ಒಂದೇ ಭೂಮಿ ತಾಯ ಮಕ್ಕಳು. ಪಂಚಭೂತಗಳಾದ ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ ಎಲ್ಲವೂ ಒಂದೇ ಆಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮನುಷ್ಯನ ಸ್ವಭಾವ, ಚಹರೆ ಬೇರೆಯಾದರೂ ತಾಯ ಬಸಿರು ಒಂದೇ ಆಗಿದೆ. ಕಳಶ, ಶಿಲುಬೆ, ಬಿಳಿಮಿನಾರು ಬೇರೆ ಬೇರೆಯಾದರೂ ಧರ್ಮದ ಉಸಿರು ಒಂದೇ ಆಗಿದೆ. ಆಂಗ್ಲ, ಆಫ್ರಿಕನ್‌ರಲ್ಲಿ ಹರಿವ ನೆತ್ತರು ಕೂಡ ಒಂದೇ ಆಗಿದೆ. ಅಕ್ಕಿ, ರಾಗಿ ಬಿಳಿದು, ಕರಿದಾದರೂ ಹುಲ್ಲಿನ ಬಣ್ಣ ಒಂದೇ ಆಗಿದೆ. ಬಾಣ, ಬಿರುಸು, ಕುಂಡ, ಹಣತೆ ಬೇರೆಬೇರೆಯಾದರೂ ಬೆಳಕಿನ ಸತ್ವ ಒಂದೇ ಆಗಿದೆ. ಕಂದ ವೃತ್ತ, ತ್ರಿಪದಿ, ವಚನ ಬೇರೆಬೇರೆಯಾದರೂ ರಸಕವಿತ್ವ ಒಂದೇ ಆಗಿದೆ. ಕರ್ನಾಟಕ, ಬಂಗಾಳ, ಆಂಧ್ರ ಎಲ್ಲೇ ಇದ್ದರೂ ಭಾರತೀಯರು ಒಂದೇ ಆಗಿದ್ದಾರೆ. ಪೂರ್ವ, ಉತ್ತರ ಪಡು, ತೆಂಕಣ ದಿಕ್ಕುಗಳು ಬೇರೆಯಾದರೂ ಗಾಳಿ ಮತ್ತು ಮುಗಿಲು ಒಂದೇ ಆಗಿದೆ. ಈ ರೀತಿ 'ನಿಸಾರ್ ಅಹಮದ್‌ರವರು ಬೇರೆ ಬೇರೆ ನಿದರ್ಶನಗಳ ಮೂಲಕ ನಾವೆಲ್ಲಾ ಒಂದೇ ಎಂದು ವಿವರಿಸಿದ್ದಾರೆ. | |
| | ***ಅಥವಾ*** | |
| | ನಿಸಾರ್ ಅಹಮದ್‌ರವರು 'ಭೂಮಿ ತಾಯಿ ಕುಡಿಗಳು' ಪದ್ಯದಲ್ಲಿ ನಾವೆಲ್ಲರೂ ಒಂದೇ ಸಹೋದರರಂತೆ ಬಾಳುವೆ ನಡೆಸಬೇಕು ಎಂಬುದನ್ನು ಹಲವು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. | |
| | ನಾವು ನೀವು ಅವರು ಇವರು ಎಲ್ಲರೂ ಒಂದೇ ತಾಯಿಯ ಮಕ್ಕಳು ಎಂದು ಪಣವ ತೊಡಬೇಕು. ನಮ್ಮ ಚಹರೆ. ಸ್ವಭಾವ ಬೇರೆಯಾದರೂ ತಾಯ ಬಸಿರು ಒಂದೇ ಆಗಿದೆ. ಕಳಶ, ಶಿಲುಬೆ, ಬಿಳಿಮಿನಾರು ಬೇರೆಬೇರೆಯಾದರೂ ಅವೆಲ್ಲವೂ ಸಾರುವ ತತ್ವ ಒಂದೇ ಆಗಿದೆ. ಆಂಗ್ಲರು, ಬಿಳಿಯರು ಮತ್ತು ಆಫ್ರಿಕನ್ನರು ಕಪ್ಪಾದರೂ ಅವರ ಮೈಯಲ್ಲಿ ಹರಿಯುವ ರಕ್ತದ ಬಣ್ಣ ಒಂದೇ ಆಗಿದೆ. ಅಕ್ಕಿ, ರಾಗಿ, ಬಿಳಿ, ಕಪ್ಪಾದರೂ ಅವು ಬೆಳೆಯುವ ಹುಲ್ಲಿನ ಬಣ್ಣ ಹಸಿರಾಗಿದೆ. ಬಾಣ, ಬಿರುಸು, ಕುಂಡ, ಹಣತೆ ಬೇರೆಬೇರೆಯಾದರೂ ಅವು ಬೀರುವ ಬೆಳಕಿನ ಸತ್ವ ಒಂದೇ ಆಗಿದೆ. ಪದ್ಯರಚನೆಗೆ ಬಳಸಿರುವ ಕಂದ, ವೃತ್ತ, ತ್ರಿಪದಿಗಳು ಬೇರೆಬೇರೆಯಾದರೂ ರಸಕವಿತ್ವ ಒಂದೇ ಆಗಿದೆ ಕರ್ನಾಟಕ, ಆಂಧ್ರ, ಬಂಗಾಳ ಹೀಗೆ ಭಾರತದ ಯಾವ ಮೂಲೆಯಲ್ಲಿದ್ದರೂ ನಾವೆಲ್ಲರೂ ಭಾರತೀಯರು. ಪೂರ್ವ, ಉತ್ತರ, ಪಡು, ತೆಂಕಣ ಯಾವ ದಿಕ್ಕಿನಲ್ಲಿ ಇದ್ದರೂ ನಾವು ಉಸಿರಾಡುವ ಗಾಳಿ ಮತ್ತು ಮುಗಿಲು ಕೂಡ ಒಂದೇ ಆಗಿದೆ. ಹೀಗೆ ಹಲವಾರು ನಿದರ್ಶನಗಳ ಮೂಲಕ ನಾವೆಲ್ಲರೂ ಒಂದೇ ಎಂದು ಕವಿ ನಿಸಾರ್ ಅಹಮದ್‌ರವರು ತುಂಬಾ ಸುಂದರವಾಗಿ ವಿವರಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 40. | ಈ ಕೆಳಗಿನವುಗಳಲ್ಲಿ ಸಜಾತಿ ಸಂಯುಕ್ತಾಕ್ಷರದಿಂದ ಕೂಡಿದ ಪದ<br>(ಎ) ರಕ್ತ (ಬಿ) ವರ್ಣ<br>(ಸಿ) ರಾಜ್ಯ (ಡಿ) ಅಪ್ಪ<br>***ಉತ್ತರ :*** (ಡಿ) ಅಪ್ಪ | |
| 41. | 'ವಿಜ್ಞಾನಿ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ<br>(ಎ) ಅಂಕಿತ (ಬಿ) ಅನ್ವರ್ಥಕ<br>(ಸಿ) ರೂಢ (ಡಿ) ಸರ್ವನಾಮ<br>***ಉತ್ತರ :*** (ಬಿ) ಅನ್ವರ್ಥಕ | |
| 42. | ಕ್ರಿಯಾಪದದ ಮೂಲರೂಪ<br>(ಎ) ಧಾತು (ಬಿ) ನಾಮ ಪ್ರಕೃತಿ<br>(ಸಿ) ವಿಭಕ್ತಿ (ಡಿ) ನಾಮಪದ<br>***ಉತ್ತರ :*** (ಎ) ಧಾತು | |
| 43. | 'ಕವಿ' ಪದದ ಅನ್ಯಲಿಂಗ ರೂಪ<br>(ಎ) ಕವಿಯಿತ್ರಿ (ಬಿ) ಕವಯಿತ್ರಿ<br>(ಸಿ) ಕವಿಯತ್ರಿ (ಡಿ) ಕವಿತ್ರಿ<br>***ಉತ್ತರ :*** (ಬಿ) ಕವಯಿತ್ರಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | 'ಮಗು' ಪದದ ಬಹುವಚನ ರೂಪ<br>(ಎ) ಮಕ್ಕಳಂದಿರು (ಬಿ) ಮಗುಗಳು<br>(ಸಿ) ಮಕ್ಕಳು (ಡಿ) ಮಕ್ಕಳಿರು<br>***ಉತ್ತರ :*** (ಸಿ) ಮಕ್ಕಳು | |
| 45. | 'ಸದಭಿರುಚಿ' ಈ ಪದವನ್ನು ಬಿಡಿಸಿ ಬರೆದಾಗ ಆಗುವ ಸಂಧಿ<br>(ಎ) ಗುಣ ಸಂಧಿ (ಬಿ) ಯಣ್ ಸಂಧಿ<br>(ಸಿ) ಅನುನಾಸಿಕ ಸಂಧಿ (ಡಿ) ಜಶ್ತ್ವ ಸಂಧಿ<br>***ಉತ್ತರ :*** (ಡಿ) ಜಶ್ತ್ವ ಸಂಧಿ | |
| 46. | 'ಮುಕ್ಕಣ್ಣ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ<br>(ಎ) ದ್ವಂದ್ವ ಸಮಾಸ (ಬಿ) ತತ್ಪುರುಷ ಸಮಾಸ<br>(ಸಿ) ಬಹುವ್ರೀಹಿ ಸಮಾಸ (ಡಿ) ಗಮಕ ಸಮಾಸ<br>***ಉತ್ತರ :*** (ಸಿ) ಬಹುವ್ರೀಹಿ ಸಮಾಸ | |
| 47. | ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಚಿಹ್ನೆ<br>(ಎ) ಉದ್ಧರಣ (ಬಿ) ಆವರಣ<br>(ಸಿ) ಪ್ರಶ್ನಾರ್ಥಕ (ಡಿ) ವಾಕ್ಯವೇಷ್ಟನ<br>***ಉತ್ತರ :*** (ಎ) ಉದ್ಧರಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 48. | 'ಬೇಗಬೇಗ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ<br>(ಎ) ಜೋಡುನುಡಿ (ಬಿ) ಕ್ರಿಯಾಪದ<br>(ಸಿ) ದ್ವಿರುಕ್ತಿ (ಡಿ) ಅನುಕರಣಾವ್ಯಯ<br>***ಉತ್ತರ :*** (ಸಿ) ದ್ವಿರುಕ್ತಿ | |
| 49. | 'ಮಗುವಿನ ಮುಖಕಮಲ ಅರಳಿತು' ಎಂಬ ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ<br>(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ<br>(ಸಿ) ದೃಷ್ಟಾಂತಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ<br>***ಉತ್ತರ :*** (ಬಿ) ರೂಪಕಾಲಂಕಾರ | |
| 50. | 'ಆಸಕ್ತಿ' ಪದದ ವಿರುದ್ಧ ಪದ<br>(ಎ) ನಿರಾಸಕ್ತಿ (ಬಿ) ಅನಾಶಕ್ತಿ<br>(ಸಿ) ದುರಾಸಕ್ತಿ (ಡಿ) ನಿಶ್ಶಕ್ತಿ<br>***ಉತ್ತರ :*** (ಎ) ನಿರಾಸಕ್ತಿ | |
| 51. | 'ಹಿಮಾಲಯದಲ್ಲಿ' ಈ ಪದದಲ್ಲಿರುವ ವಿಭಕ್ತಿ<br>(ಎ) ಷಷ್ಠೀ (ಬಿ) ತೃತೀಯಾ<br>(ಸಿ) ಚತುರ್ಥೀ (ಡಿ) ಸಪ್ತಮೀ<br>***ಉತ್ತರ :*** (ಡಿ) ಸಪ್ತಮೀ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | $4 \times 1 = 4$ |
| | ಬಿ.ವಿ. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ ೧೯೨೯ ರಲ್ಲಿ ಜನಿಸಿದರು. ಆರ್ಥಿಕವಾಗಿ ಬಡತನವಿದ್ದರೂ, ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ಅವರ ತಂದೆ ನಾರಣಪ್ಪ, ತಾಯಿ ಲಕ್ಷ್ಮಮ್ಮ. ಸಂಗೀತ, ನಾಟಕ ಮತ್ತು ಓದು ಈ ಮೂರು ಕಾರಂತರಿಗೆ ಆಸಕ್ತಿಯ ವಿಷಯವಾಗಿತ್ತು. ಒಮ್ಮೆ ಸೈಕಲ್‌ನಲ್ಲಿ ಕೃಷ್ಣಲೀಲಾ ನಾಟಕವನ್ನು ನೋಡಲು ಮಂಗಳೂರಿಗೆ ಹೋಗಿದ್ದರು. ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ ಎಂಟನೆಯ ತರಗತಿ ಓದುವ ಹೊತ್ತಿಗೆ ಶಾಲೆಯನ್ನು ಬಿಡಬೇಕಾಗಿ ಬಂತು. | |
| 52. | ಕಾರಂತರಿಗೆ ಯಾವುದರಲ್ಲಿ ಬಡತನವಿರಲಿಲ್ಲ ? | |
| | ***ಉತ್ತರ :*** | |
| | ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. | |
| 53. | ಕಾರಂತರು ಮಂಗಳೂರಿಗೆ ಏಕೆ ಹೋದರು ? | |
| | ***ಉತ್ತರ :*** | |
| | ಕಾರಂತರು ಕೃಷ್ಣಲೀಲಾ ನಾಟಕವನ್ನು ನೋಡಲು ಮಂಗಳೂರಿಗೆ ಹೋಗಿದ್ದರು. | |
| 54. | ಕಾರಂತರಿಗೆ ಯಾವ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇತ್ತು ? | |
| | ***ಉತ್ತರ :*** | |
| | ಕಾರಂತರಿಗೆ ಸಂಗೀತ, ನಾಟಕ ಮತ್ತು ಓದಿನಲ್ಲಿ ತುಂಬಾ ಆಸಕ್ತಿ ಇತ್ತು. | |
| 55. | ಕಾರಂತರು ಏಕೆ ಶಾಲೆ ಬಿಡಬೇಕಾಯಿತು ? | |
| | ***ಉತ್ತರ :*** | |
| | ಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದ ಕಾರಣ ಕಾರಂತರು ಎಂಟನೆಯ ತರಗತಿ ಓದುವ ಹೊತ್ತಿಗೆ ಶಾಲೆಯನ್ನು ಬಿಡಬೇಕಾಗಿ ಬಂತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 56. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಹಾಸಿಗೆ ಇದ್ದಷ್ಟು ಕಾಲು ಚಾಚು | |
| | * ಕೈ ಕೆಸರಾದರೆ ಬಾಯಿ ಮೊಸರು | |
| | * ದೇಶ ಸುತ್ತು; ಕೋಶ ಓದು | |
| | ***ಉತ್ತರ :*** | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 57. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ನಿಮ್ಮನ್ನು ಶಿರಸಿಯ ಮಾರಿಕಾಂಬ ಪ್ರೌಢಶಾಲೆಯಲ್ಲಿ ಓದುತ್ತಿರುವ 'ದರ್ಶನ್ / ರಂಜನಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕೋತ್ಸವ ಸಮಾರಂಭಕ್ಕೆ ಆಹ್ವಾನಿಸಿ, ಕಾರವಾರದಲ್ಲಿರುವ ನಿಮ್ಮ ತಂದೆಗೆ ಪತ್ರವೊಂದನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ಮೈಸೂರಿನಲ್ಲಿರುವ 'ವಿನಯ್ / ಭೂಮಿಕ' ಎಂದು ಭಾವಿಸಿಕೊಂಡು, ನಿಮ್ಮ ಊರಿನ ಬೀದಿದೀಪ ದುರಸ್ತಿಪಡಿಸುವಂತೆ ಕೋರಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 58. | **ಪ್ರಬಂಧ ಬರೆವಣಿಗೆ :** | 1 × 4 = 4 |
| | * ಗ್ರಂಥಾಲಯದ ಮಹತ್ವ | |
| | * ಗಣಕಯಂತ್ರದಿಂದ ವಿದ್ಯಾರ್ಥಿಗಳಿಗೆ ಆಗುವ ಉಪಯೋಗ | |
| | * ಸ್ವಚ್ಛ ಭಾರತ ಅಭಿಯಾನ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |